# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

**SPECIAL CASE :33/2023**

**ಫ್ರಾ.ಸಾ. 04**

**ದೋ.ಸಾ. 02**

| | | |
|---|---|---|
| ಸಾಕ್ಷಿಯ ಹೆಸರು | : | ನಾಗರಾಜ್ |
| ತಂದೆಯ ಹೆಸರು | : | ಗಂಗಾಧರಪ್ಪ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಮಂಡಿಕಲ್ |

**ದಿನಾಂಕ 28.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1. ಫ್ರಾಸಾ –3 ರವರು ಪರಿಚಯವಿರುತ್ತಾರೆ. ಈಗ ತೋರಿಸಿದ ಪೋಲೀಸ್ ನೋಟೀಸ್ ನಲ್ಲಿ ಸಹಿ ಇದೆ , ಸಾಕ್ಷಿಯು ತನ್ನ ಸಹಿ ಗುರುತಿಸಿದ ದಾಖಲೆ ಪೋಲೀಸ್ ನೋಟೀಸ್ ಆಗಿದ್ದು ಅದನ್ನು ಈಗಾಗಲೇ ನಿಪಿ–3(ಎ)ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು **ನಿಪಿ–3(ಪಿ )** ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ –6 ರಲ್ಲಿ ತನ್ನ ಸಹಿಯನ್ನುನೊಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು **ನಿಪಿ–6 (ಸಿ)**ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 2022 ನೇ ಸಾಲಿನ 10 ನೇ ತಿಂಗಳ ಒಂದು ದಿನ ಶೆಟ್ಟಿಗೆರೆ ಗ್ರಾಮದ ಶ್ರೀನಿವಾಸ್ ಎಂಬುವವರ ಬೆಳೆದಿದ್ದ ರೋಜಾ ಗಿಡಗಳ ಜಮೀನಿನ ಬಳಿ ಸಹಿ ಮಾಡಿರುತ್ತೇನೆ. ಅಲ್ಲಿಗೆ ಪೋಲೀಸರು ಬಂದಿದ್ದು ಗಾಂಜಾ ಗಿಡಗಳನ್ನು ಬೆಳೆದಿರುವುದನ್ನು ಕಿತ್ತಿದ್ದರು. ಸುಮಾರು 6–7 ಗಿಡಗಳನ್ನು ಬೆಳೆಸಲಾಗಿತ್ತು . ನಾನು ಮತ್ತು ಫ್ರಾಸಾ –3 ರವರು ಪಂಚನಾಮೆ ಸ್ಥಳಕ್ಕೆ ಹೋಗಿದ್ದೆವು. ಸದರಿ ಗಿಡಗಳನ್ನು ತೂಕ ಮಾಡಿದಾಗ ಸುಮಾರು 8–9 ಕೆಜಿ ಇತ್ತು. ಅದನ್ನು ಪೋಲೀಸರು ಜಪ್ತು ಪಡಿಸಿದರು. ಪೋಲೀಸರು ಆ ಕಾಲಕ್ಕೆ ಪೋಟೋಗಳನ್ನು

ತೆಗೆದಿದ್ದು ನೋಡಿದರೆ ಗುರುತಿಸಬಲ್ಲೆ.ಸಾಕ್ಷಿಯು ನಿಪಿ–7 ರಲ್ಲಿರುವ ಪೋಟೋಗಳನ್ನು ಹಾಗೂ ಪೋಟೋದಲ್ಲಿ ತನ್ನ ಜೊತೆ ಪ್ರಾಸಾ–3 ರವರು ಇರುವುದಾಗಿ ನುಡಿದಿರುತ್ತಾರೆ. ಸಾಕ್ಷಿಯು ಮುಮಾ–1 ರ ಮೇಲೆ ಅಂಟಿಸಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಮುಮಾ–1 ಘಟನಾ ಸ್ಥಳದಲ್ಲಿ ಪೋಲೀಸರು ಜಪ್ತು ಪಡಿಸಿದ್ದರು. ಸಾಕ್ಷಿಯು ನ್ಯಾಯಾಲಯದ ಮುಂದಿರು ಆರೋಪಿತರನ್ನು ನೋಡಿ ಗುರುತಿಸಿರುವುದಿಲ್ಲ. ಈ ಪ್ರಕರಣದ ಸಂಬಂದ ಪೋಲೀಸರಿಗೆ ನಾನು ಹೇಳಿಕೆ ನೀಡಿರುತ್ತೇನೆ.

**<u>ಪಾಟೀಸವಾಲುಃ 1 ನೇ ಆರೋಪಿ ಪರ ವಕೀಲರಾದ ಶ್ರೀ ಬಿ ವೈ ಕೆ ರವರಿಂದಃ</u>**

2. ನಾನು ಶೆಟ್ಟಿಗೆರೆ ಗ್ರಾಮದ ನಿವಾಸಿ ಅಲ್ಲ ಎಂದರೆ ಸರಿ. ನಾನು ವ್ಯವಸಾಯ ಮಾಡುತ್ತೇನೆ. ನಾನು ಕೊಲೆ ಪ್ರಕರಣದ ಆರೋಪಿ ಎಂದರೆ ಸರಿಯಲ್ಲ. ನಾನು ಪೆರೇಸಂದ್ರ ಪೋಲೀಸ್ ಠಾಣೆಯ ಸಿಆರ್ ಸಂಖ್ಯೆ **184/2025** ರ ಪ್ರಕರಣದಲ್ಲಿ ಸಾಕ್ಷಿ ಎಂದರೆ ಸರಿಯಲ್ಲ. ಪೋಲೀಸರು ಜಮೀನಿನ ಪಕ್ಕದಲ್ಲಿ ಜೀಪನ್ನು ನಿಲ್ಲಿಸಿ ಜಮೀನನ್ನು ಪರಿಶೀಲಿಸುತ್ತಿದ್ದರು, ನಾನು ಹೋಗಿ ನೋಡಿದಾಗ ರೋಜಾ ಗಿಡಗಳ ಮದ್ಯೆ ಗಾಂಜಾ ಗಿಡಗಳು ಬೆಳೆದಿರುವುದನ್ನು ಪೋಲೀಸರು ಪರಿಶೀಲಿಸುತ್ತಿರುವುದು ಕಂಡುಬಂತು. ನಾನು ಅಲ್ಲಿಗೆ ಹೋಗುವಷ್ಟರಲ್ಲಿ ಗಿಡಗಳನ್ನು ತೂಕ ಹಾಕಿದ್ದರು ಎಂದರೆ ಸರಿಯಲ್ಲ. ನಾನು ಘಟನಾ ಕಾಲಕ್ಕೆ ಸ್ಥಳದಲ್ಲಿ ಇರಲಿಲ್ಲ, ತದ ನಂತರ ಠಾಣೆಗೆ ನನ್ನನ್ನು ಬರ ಮಾಡಿಕೊಂಡು ದಾಖಲೆಗೆ ನನ್ನ ಸಹಿ ಪಡೆದರು ಎಂದರೆ ಸರಿಯಲ್ಲ. ಪೋಲೀಸರು ಠಾಣೆಯಲ್ಲಿ ಒಂದು ಹಾಗೂ ಘಟನಾ ಸ್ಥಳದಲ್ಲಿ ಒಂದು ಒಟ್ಟು ನನ್ನ ಎರಡು ಸಹಿಗಳನ್ನು ಪಡೆದಿದ್ದರು. ಸಹಿ ಪಡೆದ ದಾಖಲೆಗಳು ಬರವಣಿಗೆ ದಾಖಲೆಗಳಾ ಅಥವಾ ಬೆರಳಚ್ಚು ಮಾಡಿದ ದಾಖಲೆಗಳಾ ಎಂದು ಕೇಳಲಾಗಿ ಸಾಕ್ಷಿಯು ನನಗೆ ನೆನಪಿಲ್ಲ ಎಂದು

ನುಡಿದಿರುತ್ತಾರೆ. ಸ್ಥಳಕ್ಕೆ ಪೋಲೀಸರು ಗಣಕ ಯಂತ್ರ ಮತ್ತು ಮುದ್ರಣ ಯಂತ್ರವನ್ನು ತಂದಿರಲಿಲ್ಲ. ಪೋಲೀಸರು ಸ್ಥಳದಲ್ಲಿ ನಕಾಶೆಯನ್ನು ತಯಾರಿಸಿರುವುದಿಲ್ಲ. ಫ್ರಾಸಾ -3 ರವರು ನನಗೆ ತುಂಬಾ ಪರಿಚಯ ವಿದ್ದಾರೆ ಎಂದರೆ ಸರಿ. ಫ್ರಾಸಾ -3 ಹಾಗೂ ನಾನು ಹಲವಾರು ಪೋಲೀಸ್ ಪ್ರಕರಣದಲ್ಲಿ ಸಾಕ್ಷಿ ನುಡಿದಿರುತ್ತೇವೆ ಎಂದರೆ ಸರಿಯಲ್ಲ. ಫ್ರಾಸಾ-3 ರವರು ರೆಡ್ಡಿ ಗೊಲ್ಲಾರಹಳ್ಳಿ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆ. ಪೋಲೀಸರು ನನ್ನನ್ನು ಒರತು ಪಡಿಸಿ ಬೇರೆ ಎಷ್ಟು ಜನ ಬಳಿ ಸಹಿಗಳನ್ನು ಪಡೆದರು ಎಂದು ನನಗೆ ಗೊತ್ತಿಲ್ಲ. ಸರ್ಕಾರಿ ಜಾಗದಲ್ಲಿ ಬೆಳೆದಿದ್ದ ಗಾಂಜಾ ಗಿಡಗಳನ್ನು ಪೋಲೀಸರು ತಂದು ಸದರಿ ಸ್ಥಳದಲ್ಲಿ ತುಾಕ ಮಾಡಿದ್ದರು ಎಂದರೆ ಸಾಕ್ಷಿಯು ರೋಜಾ ಗಿಡಗಳ ಮದ್ಯೆ ಬೆಳೆದಿದ್ದರು ಎಂದು ನುಡಿದಿರುತ್ತಾರೆ. ಗಾಂಜಾ ಗಿಡಗಳು ಸುಮಾರು 8.00 ಕೆ ಜಿ ತುಾಕವಿದ್ದು, ಅದರಲ್ಲಿ ಹೂ ಮತ್ತು ಕಾಯಿಗಳು ಇರಲಿಲ್ಲ. ಕಟಾವು ಮಾಡಿದ ಗಾಂಜಾ ಗಿಡಗಳನ್ನು ನನ್ನ ಸಮಕ್ಷಮದಲ್ಲಿ ಪ್ರತ್ಯೇಕವಾಗಿ ತುಾಕ ಮಾಡಿರುವುದಿಲ್ಲ, ಎಲ್ಲಾ ಗಿಡಗಳನ್ನು ಒಟ್ಟಿಗೆ ತೂಕ ಮಾಡಿರುತ್ತಾರೆ. ತುಾಕ ಮಾಡಿದ ಗಿಡಗಳು ಹಸಿ ಗಿಡಗಳು ಎಂದರೆ ಸರಿ. ನಿಪಿ-7 ರ ಪೋಟೋಗಳಲ್ಲಿ ಗಾಂಜಾ ಗಿಡಗಳು ಬೆಳೆದಿರುವ ಬಗ್ಗೆ ಹಾಗೂ ಅವುಗಳನ್ನು ಕಿತ್ತಿರುವ ಬಗ್ಗೆ ನಿಶಾನೆಗಳು ಕಂಡು ಬರುವುದಿಲ್ಲ ಎಂದರೆ ಸಾಕ್ಷಿಯು ನಿಂತಿರುವ ಗಿಡಗಳನ್ನು ನೋಡಿರುವುದಿಲ್ಲ, ಕಿತ್ತಿರುವ ಗಿಡಗಳನ್ ನುನೋಡಿರುವುದಾಗಿ ನುಡಿದಿರುತ್ತಾರೆ. ನಿಪಿ-7 ಪೋಟೋಗಳಲ್ಲಿ ಗಿಡಗಳನ್ನು ಕಿತ್ತಿರುವ ಬಗ್ಗೆ ನಿಶಾನೆಗಳು ಕಂಡು ಬರುವುದಿಲ್ಲ ಎಂದರೆ ಸರಿ. ನನ್ನ ಜೊತೆ ಫ್ರಾಸಾ -3 ರವರು ಠಾಣೆ ಹಾಗೂ ಘಟನಾ ಸ್ಥಳದಲ್ಲಿ ಸಹಿಗಳನ್ನು ಮಾಡಿರುತ್ತಾರೆ. ನಾನು ಹಾಗೂ ಫ್ರಾಸಾ-3 ರವರು ಬೇರೆ ಬೇರೆ ಪುಟಗಳಲ್ಲಿ ಸಹಿಗಳನ್ನು ಮಾಡಿರುತ್ತೇವೆ ಎಂದರೆ

ಸಾಕ್ಷಿಯು ಒಂದೇ ಪುಟಗಳಲ್ಲಿ ಸಹಿಗಳನ್ನು ಮಾಡಿರುವುದಾಗಿ ನುಡಿದಿರುತ್ತಾರೆ. ನಾನು ಪೋಲೀಸರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ 2 ನೇ ಆರೋಪಿ ಪರ ವಕೀಲರಾದ ಶ್ರೀ ಪಿಬಿಎಸ್ ರವರಿಂದಃ</u>**

3. ನಿಪಿ-7 ರ ಪೊಟೋಗಳಲ್ಲಿ ಗಾಂಜಾ ಗಿಡಗಳು ಎಷ್ಟು ಉದ್ದ ಬೆಳೆದಿವೆ ಎಂದು ಕಾಣಿಸಿವುದಿಲ್ಲ ಎಂದರೆ ಸಾಕ್ಷಿಯು ಗಿಡಗಳನ್ನು ಕೀಳುವಾಗ ಅವುಗಳ ಎತ್ತರ ನೋಡಿರುವುದಿಲ್ಲ ಎಂದು ನುಡಿದಿರುತ್ತಾರೆ. ಪೋಲೀಸರು ಮಾದರಿಗಾಗಿ ಎಷ್ಟು ಗ್ರಾಂ ಗಾಂಜಾವನ್ನು ಮು.ಮಾ-1 ರ ಬ್ಯಾಗ್ ನಲ್ಲಿ ಜಪ್ತು ಪಡಿಸಿದ್ದರು ಎಂದು ನನಗೆ ನೆನಪಿಲ್ಲ. 2 ನೇಆರೋಪಿಗೂ, ಘಟನಾ ಸ್ಥಳಕ್ಕೂ ಯಾವುದೇ ಸಂಬಂದವಿಲ್ಲದಿದ್ದರೂ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 11-00 ರಿಂದ 11-30 ಗಂಟೆ ಸುಮಾರಿಗೆ ಘಟನಾ ಸ್ಥಳದಕ್ಕೆ ಹೋಗಿರುತ್ತೇನೆ. ಆರೋಪಿತರಿಗೂ ,ಮು.ಮಾಲುಗಳಿಗೂ ಯಾವುದೇ ಸಂಬಂದವಿಲ್ಲದಿದ್ದರೂ ಇದ್ದರೂ ಸಹ ಪೋಲೀಸರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

Sd/-
**(ಟಿ. ಪಿ. ರಾಮಲಿಂಗೆ ಗೌಡ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.